ಫ್ರಾಂಕ್‌ಫರ್ಟ್‌ನಲ್ಲಿ ಜನಿಸಿದಳು. ಆಕೆ ಪ್ರಕೃತಿಯಲ್ಲಿ ಆಸಕ್ತಿಯುಳ್ಳ ಕಲಾವಿದೆ, ಕೀಟಶಾಸ್ತ್ರಜ್ಞೆ. ಔಪಚಾರಿಕ ಶಿಕ್ಷಣದಿಂದಲ್ಲದಿದ್ದರೂ ಸ್ವಂತ ಆಸಕ್ತಿಯಿಂದ ಕೀಟ ಮತ್ತು ಸಸ್ಯಗಳ ಅಧ್ಯಯನ ಮಾಡಿ ಅವುಗಳನ್ನು ಚಿತ್ರಗಳ ಮೂಲಕ ದಾಖಲಿಸಿ ಆಧುನಿಕ ಪರಿಸರಶಾಸ್ತ್ರ ಮತ್ತು ಕೀಟಶಾಸ್ತ್ರಕ್ಕೆ ಒಂದು ರೀತಿಯಲ್ಲಿ ಬುನಾದಿ ಹಾಕಿಕೊಟ್ಟವಳು.

ಆಕೆಯದು ಕಲಾವಿದರ ಹಾಗೂ ಪ್ರಕಾಶಕರ ಕುಟುಂಬವಾಗಿತ್ತು. ಆಕೆಯ ತಂದೆ ಮಥೌಸ್ ಮೆರಿಯನ್ ಪ್ರಖ್ಯಾತ ಸ್ವಿಸ್ ಚಿತ್ರ ಕೆತ್ತನೆಗಾರ, ಪ್ರಕಾಶಕನಾಗಿದ್ದ. ಆತನ ಮರಣಾನಂತರ ಮರಿಯಾ ತಾಯಿ ಮತ್ತೊಂದು ಮದುವೆಯಾದರು. ಆಗ ಮರಿಯಾಳ ವಯಸ್ಸು ಮೂರು. ಆಕೆಯ ಮಲತಂದೆ ಜಾಕೊಬ್ ಮ್ಯಾರೆಲ್ ಚಿತ್ರಕಲಾವಿದ. ಚಿಕ್ಕವಯಸ್ಸಿನಿಂದಲೇ ಚಿತ್ರಕಲೆಯಲ್ಲಿ ಆಸಕ್ತಿ ತೋರಿದ ಮರಿಯಾಳ ಕೌಶಲವನ್ನು ಗುರುತಿಸಿದ ಆತ ಆಕೆಯ ಕಲೆಯನ್ನು ಪೋಷಿಸಿ, ಮಾರ್ಗದರ್ಶನ ಮಾಡಿ ವಿಶೇಷವಾಗಿ ಹೂ, ಕೀಟಗಳ ಚಿತ್ರಗಳನ್ನು ರಚಿಸುವಂತೆ ಉತ್ತೇಜಿಸಿದ. ಆ ಸಮಯದಲ್ಲಿ ಹೆಣ್ಣುಮಕ್ಕಳು ಚಿತ್ರಕಲೆಯಲ್ಲಿ ತೊಡಗಲು ಸಾಮಾಜಿಕ ವಿರೋಧವಿತ್ತು. ಪುರುಷ ಕಲಾವಿದರು ಚಿತ್ರಿಸುತ್ತಿದ್ದಂತೆ ನಗ್ನ ಚಿತ್ರಗಳನ್ನು ಬಿಡಿಸುವಂತೆಯೇ ಇರಲಿಲ್ಲ.

ಮಧ್ಯಕಾಲೀನ ಯೂರೋಪಿನಲ್ಲಿ ಕೀಟಗಳನ್ನು ಸೈತಾನನ ಪ್ರತಿರೂಪಗಳೆಂದು ಪರಿಗಣಿಸಿದ್ದರು ಹಾಗೂ ಅವುಗಳ ಅಧ್ಯಯನವನ್ನೂ ಜನ ಕೇಡೆಂದು ಭಾವಿಸಿದ್ದರು. ಕೀಟಗಳು ಇದ್ದಕ್ಕಿದ್ದಂತೆ



ವಿವಾದ ಹುಟ್ಟುಹಾಕಿದ, ಟ್ಯಾರಂಟುಲ ಜೇಡ ಹಮ್ಮಿಂಗ್ ಬರ್ಡ್ ತಿನ್ನುತ್ತಿರುವ ಹಾಗೂ ಕೆಂಜಿಗಗಳು ದೇಹದ ಸೇತುವೆ ನಿರ್ಮಿಸಿರುವ ಮೆರಿಯನ್ನಳ ಚಿತ್ರ.

ಮಣ್ಣಿಂದ ಹುಟ್ಟಿಬರುತ್ತವೆಯೆಂದೂ ಜನ ನಂಬಿದ್ದರು. ಕೀಟಗಳ ಜೀವನಚಕ್ರ, ನಡವಳಿಕೆ ಮೆರಿಯನ್‌ಳನ್ನು ಆಕರ್ಷಿಸಿತು. ಕಂಬಳಿಹುಳಗಳನ್ನು ಮನೆಯಲ್ಲಿಯೇ ಸಾಕಿ ಚಿಟ್ಟೆಗಳಾಗಿ ರೂಪಾಂತರ ಹೊಂದುವುದನ್ನು ಗಮನಿಸಿದ ಆಕೆಗೆ ಅದೇ ತನ್ನ ಮುಂದಿನ ಅಧ್ಯಯನದ, ಚಿತ್ರರಚನೆ ಕಾರ್ಯದ ಕೇಂದ್ರ ವಸ್ತುವಿಷಯವಾಯಿತು. ಆಕೆಯ ಗ್ರಹಿಕೆ, ಅಧ್ಯಯನಗಳು ಸೂಕ್ಷ್ಮ, ಸುದೀರ್ಘವಾಗಿದ್ದು ವೈಜ್ಞಾನಿಕ ಮನೋಭಾವದ ದ್ಯೋತಕವಾಗಿದ್ದವು.

18ನೇ ವಯಸ್ಸಿಗೆ ಮೆರಿಯನ್‌ಳ ವಿವಾಹ ಆಕೆಯ ಮಲತಂದೆಯ ಕಲಾಶಿಷ್ಯನಾಗಿದ್ದ ಯೊಹಾನ್ ಆಂಡ್ರಿಯಾಸ್ ಗ್ರಾಫ್ ಎಂಬುವನೊಂದಿಗೆ ನಡೆಯಿತು. ತನ್ನ ಮಲತಂದೆ ತೀರಿಕೊಂಡ ಬಳಿಕ ದಂಪತಿ ವಾಸ್ತವ್ಯವನ್ನು ನ್ಯೂರೆಂಬರ್ಗ್‌ಗೆ ವರ್ಗಾಯಿಸಿದರು. ಆಕೆ ಅಲ್ಲಿಯೂ ತನ್ನ ಪ್ರಕೃತಿ ಅಧ್ಯಯನ, ಚಿತ್ರಕಲೆ ಮುಂದುವರಿಸಿದಳು. ಅಲ್ಲಿ ಬಾಲಕಿಯರಿಗೆ ಕುಸುರಿ ಹಾಗೂ ಚಿತ್ರಕಲೆಯನ್ನು ಬೋಧಿಸಲು ಪ್ರಾರಂಭಿಸಿದಳು. ಅದರಿಂದ ಆರ್ಥಿಕ ಸ್ವಾತಂತ್ರ್ಯ ದೊರಕಿದ್ದಲ್ಲದೆ ತನ್ನ ವಿಚಾರವನ್ನು ಇತರರೊಂದಿಗೆ ಹಂಚಿಕೊಳ್ಳಲು ಅವಕಾಶ ಸಹ ದೊರಕಿತು. 1675ರಲ್ಲಿ ಮೆರಿಯನ್ ತನ್ನ ಹೂಗಳ ಅಧ್ಯಯನ ಆಧಾರಿತ ಮೊದಲ ಕೃತಿ 'ಹೂಗಳ ಪುಸ್ತಕ' (Blumenbuch – 1680ರವರೆಗೆ ಇದರ ಮೂರು ಸಂಪುಟಗಳು ಪ್ರಕಟವಾದವು) ಮತ್ತು 1679 ಹಾಗೂ 1683ರಲ್ಲಿ ಕಂಬಳಿಹುಳಗಳ ಆಧಾರಿತ ಅಧ್ಯಯನದ ಚಿತ್ರಗಳ 'ಕಂಬಳಿಹುಳಗಳ ಅದ್ಭುತ ರೂಪಾಂತರ ಮತ್ತು ಅವುಗಳ ಹೂಗಳ ವಿಚಿತ್ರ ಆಹಾರ' ಎಂಬ ಎರಡು ಸಂಪುಟಗಳನ್ನು (Der Raupen wunderbare Verwandelung und sonderbare Blumennahrung) ಪ್ರಕಟಿಸಿದಳು.

1679ರಲ್ಲಿ ಪ್ರಕಟವಾದ 'ಕಂಬಳಿಹುಳಗಳ ಅದ್ಭುತ ರೂಪಾಂತರ ಮತ್ತು ಅವುಗಳ ಹೂಗಳ ವಿಚಿತ್ರ ಆಹಾರ' ಕೃತಿ ಹೆಸರುವಾಸಿಯಾಯಿತು. ಎರಡು ಸಂಪುಟಗಳ ಈ ಕೃತಿ ಆ ಕಾಲದ ಒಂದು ಕ್ರಾಂತಿಕಾರಿ ಪ್ರಕಟಣೆಯೇ ಆಗಿತ್ತು. ಅದರಲ್ಲಿ ಚಿಟ್ಟೆ ಮತ್ತು ಪತಂಗಗಳ ಜೀವನಚಕ್ರದ ಕುರಿತು ಹಾಗೂ ಅವುಗಳ ಆಹಾರವಾದ ಸಸ್ಯಗಳ ಕುರಿತು ವಿವರ, ಸುಂದರ, ಆಕರ್ಷಕ ಚಿತ್ರಗಳಿದ್ದವು. ಮೆರಿಯನ್‌ಳ ಚಿತ್ರಗಳು ವೈಜ್ಞಾನಿಕವಾಗಿ ನಿಖರವಾಗಿದ್ದುದಷ್ಟೇ ಅಲ್ಲದೆ ಸುಂದರವಾಗಿ ಸಹ ಇದ್ದವು. ವಿಜ್ಞಾನ ಮತ್ತು ಕಲೆಯ ಈ ರೀತಿಯ ಸುಂದರ ಸಮ್ಮಿಳನ ಆಗಿನ ಕಾಲಕ್ಕೆ ಮೊಟ್ಟ ಮೊದಲನೆಯದಾಗಿತ್ತು.

### ಅಡೆತಡೆಗಳ ದಾಟಿ ದಿಟ್ಟ ಹೆಜ್ಜೆ

ವಿಜ್ಞಾನದ ಮತ್ತು ಕಲಾಜಗತ್ತಿಗೆ ಮಾತ್ರ ಆಕೆಯ ಕೊಡುಗೆ ಮುಖ್ಯವಾದುದಷ್ಟೇ ಅಲ್ಲ, ಆಗಿನ ಪುರುಷ ಪ್ರಧಾನ ಕ್ಷೇತ್ರಗಳಲ್ಲಿ ಆಕೆ ಮಾಡಿದ ಸಾಧನೆಯೂ ಗಮನಾರ್ಹ. 17ನೇ ಶತಮಾನದಲ್ಲಿ ಮಹಿಳೆಯರನ್ನು ವೈಜ್ಞಾನಿಕ ಮತ್ತು ಶೈಕ್ಷಣಿಕ ಕ್ಷೇತ್ರಗಳಿಂದ ದೂರವಿರಿಸಲಾಗಿತ್ತು. ಈ ಅಡೆತಡೆಗಳನ್ನು ಮೆರಿಯನ್ ಧಿಕ್ಕರಿಸಿ ದೃಢ ನಿರ್ಧಾರದಿಂದ ಈ ಕ್ಷೇತ್ರಗಳಿಗೆ ಹೆಜ್ಜೆಯಿರಿಸಿದ್ದಳು.

